ಉಮಾ ಎಂ.ವಿ. ಬೆಂಗಳೂರು
ಅಳು–ನಗು ಎತ್ತಣ ಸಂಬಂಧ ರಾಮ್ ಮಹೋದಯ?



ವಾಹಿನಿಗಳದೇ; ಸೀರಿಯಲ್ ಕಂಡಾಗ ಅಳು; 'ನಟಿ ಗರ್ಭಿಣಿ; ಊರಿಗೇ ಹರ್ಷ'ದಂತಹ ಘೋಷಣೆಗೆ ನಗು.

ರಮೇಶ್ ಜಾವಲಗಿ, ಬನಹಟ್ಟಿ
ಈ ರಾಜಕಾರಣಿಗಳು 'ಅಡಿಗೆ ಕಲ್ಲು' ಹಾಕುವುದರಿಂದ ಅವರಿಗೆ ಏನು ಲಾಭ?
ಆ ಸಮುದಾಯದಲ್ಲಿ ಅವರ ಬೇಳೆ ಬೇಯುತ್ತದೆ.

ಚಾಪಲ್ಮನೆ ಸುರೇಶ ನಾಯಕ್, ಹಾಲ್ಮತ್ತೂರ್
ಮೇಕೆದಾಟು ಪಾದಯಾತ್ರೆಯ ಹಿಂದಿನ ರಹಸ್ಯ ಚುನಾವಣಾ ದಾಟು ಇರಬಹುದೇ ಸಾರ್?
ಕಾರಣವೇನೋ ಅದೇ. ಆದರೆ ಇವರು ದಾಟಿದ ಆ ಸ್ಥಳವನ್ನು ಇನ್ನುಮುಂದೆ 'ತೋಳದಾಟು' ಎನ್ನಬೇಕಾದೀತು!

ಬಿದರಹಳ್ಳಿ ಚನ್ನವೀರಪ್ಪ, ಹಿರೇಹಡಗಲಿ
ಪರಿಪೂರ್ಣತೆಗೆ ಗಂಡಿಗೊಂದು ಹೆಣ್ಣು, ಹೆಣ್ಣಿಗೊಂದು ಗಂಡು. ಇದು ಪ್ರಕೃತಿ ನಿಯಮವೆ?



ಪ್ರಕೃತಿ ಹಾಗೆಲ್ಲ ಲಿಂಗರೇಷನ್ ಕೋಟಾ ಇಟ್ಟಿಲ್ಲ. ಇದು ನಾಗರಿಕ ನಿಯಮ.

ಮಲ್ಲಿಕಾರ್ಜುನ, ಸುರಧೇನುಪುರ
ಆಳುವವರೇ ಕೆಳಮನೆ, ಮೇಲ್ಮನೆ ಅಂತಿದ್ದಾರೆ. ಸರೀನಾ?
ಒಬ್ಬರನ್ನೊಬ್ಬರು ಕೆಳಗೆಳೆಯಲು, ಮೇಲೇರಲು ಯತ್ನಿಸುವ ಮನೆಗಳು ಎಂಬ ಅರ್ಥವಂತೆ.

ಮಂಡಿ ಕುಮಾರ್, ಬೆಂಗಳೂರು
ನಾನು ಎನ್ನುವವನು ನಾವು ಎನ್ನುವುದು ಯಾವಾಗ?
'ನಾವು ಒಟ್ಟು ಐದೋಟು' ಎನ್ನುತ್ತಾ ಕೈ ಚಾಚುವಾಗ.

ಜೆ.ಆರ್. ಆದಿನಾರಾಯಣಮುನಿ, ಕೊಳ್ಳೇಗಾಲ
ನಮ್ಮ ಹೃದಯದ ವೀಣೆಯನ್ನು ಯಾರು ಹಿತವಾಗಿ ನುಡಿಸುತ್ತಾರೆ?
ನಮ್ಮ ಮನಸ್ಸಿನ ರಾಗವನ್ನು ಬಲ್ಲವರು.

ಕಾವ್ಯಶ್ರೀ ಪತ್ರಿಮಠ, ಸುರಪುರ
ಶಿಕ್ಷಕರು, ವಿದ್ಯಾರ್ಥಿಗಳ ನಡುವೆ ಅನುಬಂಧ ಹೇಗಿರಬೇಕು?
ಸ್ಫಟಿಕದಂತೆ ನೇರ, ಪ್ಲಾಸ್ಟಿಕ್ ಪ್ರೊಟ್ರಾಕ್ಟರ್‌ನಂತೆ ಪಾರದರ್ಶಕ.

ಜೆ. ಪ್ರದೀಪಕುಮಾರ್, ಹೂವಿನಹಡಗಲಿ
ಅದ್ದೂರಿ ಮದುವೆಗಳಿಗೆ ಕಡಿವಾಣ ಹಾಕಿದ ಕೊರೊನಾವನ್ನು ಏನೆಂದು ಕರೆಯೋಣ?
ಕಂಪಿತಜನತನುಧನವರ್ಧನಾಸುರ.

ಧನ್ಯತ ಎಂ.ಸಿ. ಬೆಂಗಳೂರು
ಹೆಂಡತಿಯನ್ನು ಮನೆಯಾಕೆ ಎಂದು ಕರೆಯುವುದೇಕೆ?
'ಸಿಕ್ಕದ್ದಿಕ್ಕಲ್ಲಿ ಬಿಸಾಕಿರ್‍ತೀರ. ನಿಮಗ್ಯಾಕೆ ಯಾಕೆ?' ಎಂದು ಪದೇ ಪದೇ ಬೈದುದರಿಂದ ಅಂಟಿಕೊಂಡ ಅಡ್ಡಹೆಸರಂತೆ.

ಶೃತಿ ರಿಗ್ರೆಟ್ ಐಯ್ಯರ್, ಬೆಂಗಳೂರು
ಹೆಂಡತಿಗೆ ಗೃಹಲಕ್ಷ್ಮಿ ಅಂತಾರೆ. ಗಂಡಸಿಗೆ?
ಮನೆ ಸೇರುತ್ತಲೇ ಉದ್ದಕ್ಕೆ ಪವಡಿಸುವುದರಿಂದ – ಗೃಹವಿಷ್ಣು!

ಕಾಳೀಹುಂಡಿ ಶಿವಕುಮಾರ್, ಮೈಸೂರು
ಎಲ್ಲ ಓದುಗರ ಪ್ರಶ್ನೆಗಳು 'ಸುಧಾ' ಪತ್ರಿಕೆಯ ಕಚೇರಿಯಲ್ಲಿ ಸೇರಿದಾಗ ಅವುಗಳೆಲ್ಲ ಏನು ಮಾಡುತ್ತಿರುತ್ತವೆ?
ಯಾರಿಗೆ ಪ್ರಕಟಣಾಯೋಗ ಮೊದಲು ಎಂದು ಬೆಟ್ಟಿಂಗ್ ಕಟ್ಟುತ್ತಿರುತ್ತವೆ.

ವಿಜೇತಾ ವಿಜು, ಊರಿಲ್ಲ
ಟೀವಿ ವಾಹಿನಿಯವರು ಬಹುಕಾಲದಿಂದ ಪಾತ್ರಧಾರಿಗಳ ಹೆಸರುಗಳನ್ನೇ ತೋರಿಸುತ್ತಿಲ್ಲವಲ್ಲಾ...?
ಒರಿಜಿನಲ್ ಹೆಸರನ್ನು ಬಹಳ ದಿನಗಳಿಂದ ಬಳಸದಿರುವುದರಿಂದ ವಾಹಿನಿಗೇ ಮರೆತುಹೋಗಿದೆಯಂತೆ.

## ವಾರದ ಪ್ರಶ್ನೆ

ಎಸ್.ಸಿ. ರಮೇಶ್, ಮೈಸೂರು
ಬಯಸಿ ಲಗ್ನವಾದ ಸೆಲಿಬ್ರಿಟಿಗಳು ಮೂರ್‍ನಾಲ್ಕು ವರ್ಷದಲ್ಲೇ ವಿಚ್ಛೇದನ ಪಡೆದು ಮೂರ್‍ನಾಲ್ಕು ಮದುವೆ ಆಗುವುದೇಕೆ?
ಅವರಿಗೆ ಲಗ್ನವೂ ಒಂದು ಫಿಲ್ಮ್ ಲೆಕ್ಕ. ಮುಂದಿನದಾದರೂ ಹಿಟ್ ಆದೀತೆಂದೇ ಮರುಮರುಯತ್ನ!

ಅನಸೂಯ ಟಿ., ಕೇದಿಗೆಮನೆ
ಯೋಗ್ಯ ಅಳಿಯನನ್ನು ಹುಡುಕಲು ಯಾವ ಮಾನದಂಡ ಉಪಯೋಗಿಸಬೇಕು?
ಮಾನ ಹೋಗುವ, ದಂಡ ಕಟ್ಟುವ ಕೆಲಸ ಮಾಡದಿರುವುದೇ ಮಾನದಂಡ.

ಪಿ. ಜಯವಂತ ಪೈ, ಕುಂದಾಪುರ
ಕೋಟ್ಯಧೀಶರೆಲ್ಲ ಬಿಪಿಎಲ್ ಕಾರ್ಡ್ ಹೊಂದಿದ್ದಾರಲ್ಲಾ...?
ಪಾಪ! ಅವರು ಬಿಪಿಎಲ್ ಎಂದರೆ 'ಬಿಗ್ ಪವರ್‌ಫುಲ್ ಲೀಗ್' ಎಂದುಕೊಂಡು ಪಡೆದರಂತೆ.

ಮಹಾವೀರ ಕಾಸರ, ಶಿವಮೊಗ್ಗ
ಹುಡುಗಿಯರು ಆಂಜನೇಯನ ದೇವಸ್ಥಾನಕ್ಕೆ ಬರಲು ಕಾರಣವೇನು?



'ಗಿಡ ತಾ' ಎಂದರೆ ಬೆಟ್ಟವನ್ನೇ ತರುವಂತಹ ಹುಡುಗರನ್ನು ಕರುಣಿಸೆಂದು ಬೇಡಲು.

ಬೂಕನಕೆರೆ ವಿಜೇಂದ್ರ, ಮೈಸೂರು
ವಯಸ್ಸಾದಂತೆ ಗಂಡಸರಿಗೆ ಚಪಲ ಜಾಸ್ತಿಯಾಗುತ್ತದೆಯಲ್ಲ...?
ಎಲ್ಲ ರಂಗದಲ್ಲೂ ಅವಕಾಶ ತಗ್ಗಿದಷ್ಟೂ ಆಕಾಂಕ್ಷೆ ಬಲಿಯುವುದು ಮನುಜಪ್ರವೃತ್ತಿ.

ಎಸ್.ಕೆ. ಶ್ರೀನಿವಾಸನ್, ಬೆಂಗಳೂರು
'ನಡ ಭದ್ರ ಇರಬೇಕು' ಅಂತಾರಲ್ಲ, ಅಂಗಂದ್ರೇನ್ಸ?
ಟೈರ್ ಬೆಳೆಸ್ಕೊಂಡ್ರೆ ಆರೋಗ್ಯ ಪಂಕ್ಚರ್ ಆಗತ್ತೇಂತ.

■ ರಾಮ್

ನೀವೂ ಪ್ರಶ್ನೆ ಕಳಿಸಿ: editorsu@sudha.co.in